## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

*ಸಿ.ಸಿ. ಸಂಖ್ಯೆ : 947/2021*

*ಚಾಸಾ : 10*
*ಪ್ರಾಸಾ : 9*

| | |
|---|---|
| ಹೆಸರು | : ಶಿವಕುಮಾರ್ ಪಿ |
| ತಂದೆಯ ಹೆಸರು | : ಪ್ರಭು ಡಿ ಎ |
| ವಯಸ್ಸು | : 41 ವರ್ಷ |
| ಉದ್ಯೋಗ | : ಪೋಲಿಸ್ ಮುಖ್ಯ ಪೇದೆ, ಭಾಗಮಂಡಲ ಪೋಲಿಸ್ ಠಾಣೆ |
| ವಾಸಸ್ಥಳ | : ಭಾಗಮಂಡಲ |

**ದಿನಾಂಕ : *20-06-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ : -**

ನಾನು 2009 ನೇ ಇಸವಿಯಿಂದ 2014 ನೇ ಇಸವಿಯವರೆಗೆ ರವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16-05-2021 ರಂದು ನಾನು ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ16 ರವರು ಈ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿ ಹಾಜರುಪಡಿಸುವಂತೆ ಮೌಖಿಕ ಆದೇಶ ಮಾಡಿದ್ದು, ಆ ಪ್ರಕಾರ ನಾನು, ಚಾಸಾ-7 ರಿಂದ 9 ಹಾಗೂ 11 ರವರೊಂದಿಗೆ ಆರೋಪಿಗಳ ಪತ್ತೆ ಹಚ್ಚುವ ಸಲುವಾಗಿ ಮಟ್ಟ ಗ್ರಾಮದ ಬಸ್ ನಿಲ್ದಾಣದ ಬಳಿ ತೆರಳಿದಾಗ 1 ರಿಂದ 4 ನೇ ಆರೋಪಿಗಳು ಅಲ್ಲಿ ಇದ್ದಿದ್ದು, ಅವರುಗಳನ್ನು ವಶಕ್ಕೆ ಪಡೆದು ಠಾಣೆಗೆ ಹಿಂತಿರುಗಿ ಅವರುಗಳನ್ನು ಚಾಸಾ16 ರವರ ಮುಂದೆ ಹಾಜರುಪಡಿಸಿರುತ್ತೇವೆ.

ನಂತರ ಅದೇ ದಿನ ಮಧ್ಯಾಹ್ನ ಚಾಸಾ16 ರವರು ನಮ್ಮನ್ನು ಹಾಗೂ 1 ರಿಂದ 4 ನೇ ಆರೋಪಿಗಳನ್ನು ಅವರುಗಳು ತಿಳಿಸಿದ ಕೃತ್ಯ ಸ್ದಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಾಸಾ16 ರವರು ಆರೋಪಿಗಳು ತೋರಿಸಿಕೊಟ್ಟ ಕೃತ್ಯ ಸ್ದಳದಲ್ಲಿ ಮಧ್ಯಾಹ್ನ 1.45 ರಿಂದ 2.30 ರವರೆಗೆ ಕೃತ್ಯ ಸ್ಥಳದ ಮಹಜರ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ನಾನು

ಫೋಟೋ ತೆಗೆದಿರುತ್ತೇನೆ. ಸದರಿ ಮಹಜರಿಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ7ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ತನಿಖಾಧಿಕಾರಿಯವರು ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ7 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ7(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ನಿಪಿ7ರಂತೆ ಮಹಜರ ಕ್ರಮ ಜರುಗಿಸುವಾಗ ಸಮಯದಲ್ಲಿ ತೆಗೆದ ಫೋಟೋ ಎಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಪಿ17 ಎಂದು ಗುರುತಿಸಲಾಯಿತು.

ನಂತರ 4ನೇ ಆರೋಪಿಯು ತನ್ನ ಸ್ವಇಚ್ಛ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ಸ್ವತ್ತುಗಳಿರುವ ಜಾಗವನ್ನು ತೋರಿಸುವುದಾಗಿ ತಿಳಿಸಿದ್ದು, ಆ ಪ್ರಕಾರ ತನಿಖಾಧಿಕಾರಿಯವರಾದ ಚಾಸಾ16 ರವರು ನಮ್ಮನ್ನು ಹಾಗೂ 4ನೇ ಆರೋಪಿಯನ್ನು ಆತ ತಿಳಿಸಿದ ಕೃತ್ಯಕ್ಕೆ ಬಳಸಿದ ಸ್ವತ್ತುಗಳು ಇಟ್ಟಿರುವ ಸ್ಥಳವಾದ ಮಟ್ಟ ಗ್ರಾಮದ ತೆರೆಸಾ ಎನ್ನುವವರಿಗೆ ಸೇರಿದ 5ನೇ ಆರೋಪಿ ಬಾಡಿಗೆಗೆ ಇದ್ದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 4ನೇ ಆರೋಪಿಯು ತನಿಖಾಧಿಕಾರಿಯವರ ಮುಂದೆ ಕೃತ್ಯಕ್ಕೆ ಬಳಸಿದ ವಸ್ತುಗಳಾದ ಎರಡು ಚಾಕು, ಮರದ ದಿಮ್ಮಿ, ಎರಡು ಚೂರಿ, ಒಂದು ಪ್ಲಾಸ್ಟಿಕ್ ಥಾಟು, ಎರಡು ಟಾರ್ಚ್ ಲೈಟ್, ಹಗ್ಗ, ಎರಡು ಕತ್ತಿ, ತೂಕದ ಯಂತ್ರ ಹಾಗೂ ಎರಡು ಪ್ಲಾಸ್ಟಿಕ್ ಚೀಲಗಳನ್ನು ಹಾಗೂ ಟಿವಿಎಸ್ ಬೈಕ್, ಪಿಕಪ್ ಜೀಪ್ ಗಳನ್ನು ತೋರಿಸಿಕೊಟ್ಟಿದ್ದು, ಚಾಸಾ16 ರವರು ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಮಹಜರ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಆ ಸಮಯದಲ್ಲಿ ನಾನು ಫೋಟೋ ತೆಗೆದಿರುತ್ತೇನೆ. ಸದರಿ ಮಹಜರಿಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ9ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ತನಿಖಾಧಿಕಾರಿಯವರು ಜರುಗಿಸಿದ ಅಮಾನತ್ತು ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ9(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ10 ರಿಂದ 13 ಹಾಗೂ 16 ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಅದು

ಮೇಲೆ ಹೇಳಿದಂತೆ ನಿಪಿ9ರಂತೆ ಮಹಜರ ಕ್ರಮ ಜರುಗಿಸುವಾಗ ಸಮಯದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ.

ನಂತರ 3ನೇ ಆರೋಪಿಯು ತನ್ನ ಸ್ವಇಚ್ಚ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿರುವ ರಾಯಲ್ ಎನ್ ಫೀಲ್ಡ್ ಬೈಕ್ ಇರುವ ಹಾಗೂ ಕೃತ್ಯದ ದನದ ಮಾಂಸವನ್ನು ಮಾರಾಟ ಮಾಡಿ ಬಂದ ಹಣ ಇರುವ ಜಾಗವನ್ನು ತೋರಿಸುವುದಾಗಿ ತಿಳಿಸಿದ್ದು, ಆ ಪ್ರಕಾರ ತನಿಖಾಧಿಕಾರಿಯವರಾದ ಚಾಸಾ16 ರವರು ನಮ್ಮನ್ನು ಹಾಗೂ 3ನೇ ಆರೋಪಿಯನ್ನು ಆತ ತಿಳಿಸಿದ ಕೃತ್ಯಕ್ಕೆ ಬಳಸಿದ ಕೃತ್ಯಕ್ಕೆ ಬಳಸಿರುವ ರಾಯಲ್ ಎನ್ ಫೀಲ್ಡ್ ಬೈಕ್ ಇರುವ ಹಾಗೂ ಕೃತ್ಯದ ದನದ ಮಾಂಸವನ್ನು ಮಾರಾಟ ಮಾಡಿ ಬಂದ ಹಣ ಇರುವ ಸ್ಥಳವಾದ ಮಾಲ್ದಾರೆ ಗ್ರಾಮದ ಕಲ್ಲಳ್ಳ ಚೋಟೆಪಾಳ್ಯ 3ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 3ನೇ ಆರೋಪಿಯು ತನಿಖಾಧಿಕಾರಿಯವರ ಮುಂದೆ ಕೃತ್ಯಕ್ಕೆ ಬಳಸಿದ ರಾಯಲ್ ಎನ್ ಫೀಲ್ಡ್ ಬೈಕ್ ಹಾಗೂ ಕೃತ್ಯದ ದನದ ಮಾಂಸವನ್ನು ಮಾರಾಟ ಮಾಡಿ ಬಂದ ಹಣವಾದ ನಗದು ರೂ. 20,000/- ಗಳನ್ನು ಹಾಜರುಪಡಿಸಿದ್ದು, ಚಾಸಾ16 ರವರು ಸಂಜೆ 4.45 ರಿಂದ 5.45 ಗಂಟೆಯವರೆಗೆ ಮಹಜರ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಆ ಸಮಯದಲ್ಲಿ ನಾನು ಫೋಟೋ ಹಾಗೂ ವೀಡಿಯೋ ತೆಗೆದಿರುತ್ತೇನೆ. ಸದರಿ ಮಹಜರಿಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ8ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ತನಿಖಾಧಿಕಾರಿಯವರು ಜರುಗಿಸಿದ ಅಮಾನತ್ತು ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ14 ಹಾಗೂ 15 ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ನಿಪಿ8ರಂತೆ ಮಹಜರ ಕ್ರಮ ಜರುಗಿಸುವಾಗ ಸಮಯದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ.

ಆ ರೀತಿ ಮಹಜರಿಗಳ ಸಮಯದಲ್ಲಿ ತೆಗೆದ ಫೋಟೋಗಳನ್ನು ಹಾಗೂ ವೀಡಿಯೋವನ್ನು ಠಾಣೆಯ ಕಂಪ್ಯೂಟರ್ ನಲ್ಲಿ ಕಂಪ್ಯೂಟರ್ ಗೆ ಡೌನ್ ಲೋಡ್ ಮಾಡಿಸಿ, ಪ್ರಿಂಟ್ ಔಟ್ ಮೂಲಕ ಪ್ರಿಂಟ್ ನ್ನು ತೆಗೆದು, ಸಿಡಿಗೆ ಕಾಪಿ ಮಾಡಿಸಿ ಸದರಿ

ಸಿಡಿ ಮತ್ತು ಫೋಟೋವನ್ನು ಚಾಸಾ-*16* ರವರ ಮುಂದೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಭಾರತ ಸಾಕ್ಷ್ಯ ಅಧಿನಿಯಮ ಕಲಂ *65(ಬಿ)* ಪ್ರಕಾರ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಗೆ ನಿಪಿ*6* ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಮಹಜರಿನ ಸಮಯದಲ್ಲಿ ತೆಗೆದ ಫೋಟೋಗಳು ಹಾಗೂ ವೀಡಿಯೋ ಇರುವ ಸಿಡಿ ಎಂದು ಗುರುತಿಸುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದು ತಾನು ಭಾರತ ಸಾಕ್ಷ್ಯ ಅಧಿನಿಯಮ ಕಲಂ *65(ಬಿ)* ಪ್ರಕಾರ ನೀಡಿದ ಪ್ರಮಾಣ ಪತ್ರ ಎಂದು ನೋಡಿ ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತಾರೆ. ಸಾಕ್ಷಿ ಗುರುತಿದ ಮೇರೆಗೆ ಸದರಿ ಪ್ರಮಾಣ ಪತ್ರವನ್ನು ದಾಖಲೆಯನ್ನು ನಿಪಿ*18* ಎಂದು, ಸಾಕ್ಷಿಯ ಸಹಿಯನ್ನು ನಿಪಿ*18*ಎ ಎಂದು ಗುರುತಿಸಲಾಯಿತು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ *1* ರಿಂದ *14*ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ *1* ಹಾಗೂ *2*ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. *3* ಮತ್ತು *4*ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. *3* ಹಾಗೂ *4* ನೇ ಆರೋಪಿಗಳು ಗೈರು ಹಾಜರಾಗಿದ್ದು, ಸದರಿ ಆರೋಪಿಗಳ ಪರ ವಕೀಲರು ಅವರುಗಳ ಹಾಜರಾತಿ ವಿನಾಯಿತಿಯನ್ನು ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟಿ ಸವಾಲು : ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ :**

4ನೇ ಆರೋಪಿಯ ಮನೆಯಲ್ಲಿ ಅಮಾನತ್ತುಪಡಿಸಿಕೊಂಡ ವಾಹನಗಳ ನೋಂದಣಿ ಸಂಖ್ಯೆ ನನಗೆ ನೆನಪಿರುವುದಿಲ್ಲ. ನಿಪಿ9 ರಂತೆ ಮಹಜರ ಕ್ರಮ ಜರುಗಿಸಿ ಮನೆಯ ಚೆಕ್ ಬಂಧಿ ಹೇಳಬಲ್ಲೆ. ಸದರಿ ಮನೆಯ ಪೂರ್ವಕ್ಕೆ ಮನೆಗಳು, ಪಶ್ಚಿಮಕ್ಕೆ ವಾಸದ ಮನೆ ಹಾಗೂ ಎಸ್ಟೇಟ್ ಇರುತ್ತದೆ. ಉತ್ತರ ಹಾಗೂ ದಕ್ಷಿಣಕ್ಕೆ ಏನಿರುತ್ತದೆಂದು ನನಗೆ ಅಷ್ಟು ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ8 ರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಬೈಕ್ ನ ನೋಂದಣಿ ಸಂಖ್ಯೆ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ8 ರಡಿಯಲ್ಲಿ ಐನೂರು ಮುಖಬೆಲೆಯ ನಲವತ್ತು ನೋಟುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು.

ಫೋಟೋ ಹಾಗು ವೀಡಿಯೋ ಮಾಡುವ ಸಂಬಂಧ ಯಾವುದೇ ವಿಶೇಷ ತರಭೇತಿ ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಇಲಾಖಾ ತರಭೇತಿಯ ಸಮಯದಲ್ಲಿ ಆ ಬಗ್ಗೆ ತಿಳಿಸಿಕೊಡುತ್ತಾರೆಂದು ನುಡಿಯುತ್ತಾರೆ. ನಿಪಿ 18 ಪ್ರಮಾಣ ಪತ್ರದಲ್ಲಿ ನಾನು ಯಾವ ಕ್ಯಾಮರದಿಂದ ಫೋಟೋ ಹಾಗಾ ವೀಡಿಯೋ ತೆಗೆದಿರುತ್ತೇನೆಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಇಲಾಖಾ ಕ್ಯಾಮರಾ ದಿಂದ ಆ ರೀತಿ ಫೋಟೋ ಹಾಗೂ ವೀಡಿಯೋ ತೆಗೆದಿರುವುದಾಗಿ ತಿಳಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಯಾವ ಕಂಪ್ಯೂಟರ್ ನಲ್ಲಿ ಸಿಡಿಗೆ ಡೌನ್ ಲೋಡ್ ಮಾಡಲಾಗಿದೆ ಎಂದು ನಿಖರವಾಗಿ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಠಾಣಾ ಇಲಾಖಾ ಕಂಪ್ಯೂಟರ್ ನ ಸಿಡಿಗೆ ಡೌನ್‌ಲೋಡ್ ಮಾಡಿರುವುದಾಗಿ ತಿಳಿಸಿರುತ್ತೇನೆಂದು ನುಡಿಯುತ್ತಾರೆ.

ನಾನು ನಿಪಿ 7 ರಿಂದ 9 ನ್ನು ಜರುಗಿಸುವಾಗ ಸಮಯದಲ್ಲಿ ಇದ್ದಿರಲಿಲ್ಲ ಹಾಗೂ ಅಲ್ಲಿ ಯಾವುದೇ ಫೋಟೋ ಹಾಗೂ ವೀಡಿಯೋ ತೆಗೆದಿರುವುದಿಲ್ಲ, ಆ ಕಾರಣಕ್ಕಾಗಿ ಸ್ಪಷ್ಟವಾಗಿ ನಿಪಿ18 ರಲ್ಲಿ ಆ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ***1*** ರಿಂದ ***4*** ನೇ ಆರೋಪಿಗಳನ್ನು ವಶಕ್ಕೆ ಪಡೆದ ಸಮಯದಲ್ಲಿ ಅವರುಗಳು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರೆಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಹಾಗೂ ನಮ್ಮ ಸಿಬ್ಬಂದಿಗಳು ***1*** ರಿಂದ ***4*** ನೇ ಆರೋಪಿಗಳನ್ನು ವಶಕ್ಕೆ ಪಡೆದಿರುವುದಿಲ್ಲ ಹಾಗೂ ತನಿಖಾಧಿಕಾರಿಯವರ ಮುಂದೆ ಅವರುಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಆ ಕಾರಣಕ್ಕಾಗಿ ನನಗೆ ಅವರುಗಳು ಧರಿಸಿದ್ದ ಬಟ್ಟೆಯ ಬಣ್ಣವನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.